ದಿನಾಂಕಃ 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

1) ದೂರುದಾರರು ನನಗೆ 2016 ನೇ ಸಾಲಿನಿಂದ ಪರಿಚಯ ಇರುತ್ತಾರೆ. ನನ್ನ ಮತ್ತು ದೂರುದಾರರ ನಡುವೆ 2016 ರಿಂದ ಹಣಕಾಸಿನ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ದೂರುದಾರರು ನನಗೆ ಗ್ರಾಹಕರಾಗಿರುತ್ತಾರೆ. ನಾನು ಅಕ್ಟೋಬರ್ 2022 ರಲ್ಲಿ ದೂರುದಾರರ ಬಳಿ ರೂ. 4,50,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು 1 ವರ್ಷದ ಒಳಗಾಗಿ ಮರುಪಾವತಿ ಮಾಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣದ ಭದ್ರತೆಗಾಗಿ ನಿಶಾನೆ ಪಿ-1 ಚೆಕ್ಕು ನೀಡಿರುತ್ತೇನೆ ಎಂದರೆ ಸರಿಯಲ್ಲ.

2) ನಿಶಾನೆ ಪಿ-1 ಚೆಕ್ಕಿನಲ್ಲಿ ಕಂಡು ಬರುವ ಸಹಿ ನನ್ನದೇ ಆಗಿರುತ್ತದೆ. ನಾನು ನಿಶಾನೆ ಪಿ-1 ಚೆಕ್ಕನ್ನು ಬೇರೆ ಅವರ ಕಡೆಯಿಂದ ಬರೆಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸೇರಿದ ದ್ವಿಚಕ್ರ ವಾಹನವನ್ನು ದೂರುದಾರರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದ್ವಿಚಕ್ರ ವಾಹನದ ದಾಖಲೆಯನ್ನು ದೂರುದಾರರಿಗೆ ನೀಡಿರುತ್ತೇನೆ ಎಂದರೆ ಸರಿ. ದ್ವಿಚಕ್ರ ವಾಹನದ ಸಾಲದ ಬಗ್ಗೆ ನಾನು ದೂರುದಾರರಿಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ವಾಹನದ ಮೇಲೆ ಸಾಲ ಇರುವ ಕಾರಣ ನಾನು ಚೆಕ್ಕನ್ನು ನೀಡಿರುತ್ತೇನೆ. ನಾನು ದ್ವಿಚಕ್ರ ವಾಹನದ ಮೇಲೆ ಸಾಲ ಇರುವ ಕಾರಣ ದೂರುದಾರರ ಹೆಸರಿಗೆ ನೋಂದಣಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು ದೂರುದಾರರಿಗೆ ವಾಹನವನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನವನ್ನು ಹುಣಸೂರಿನಲ್ಲಿ ಅಮಾನತು ಪಡೆಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3) ದೂರುದಾರರು ನಾನು ಅವರ ದ್ವಿಚಕ್ರ ವಾಹನವನ್ನು ರೀಪೇರಿ ಮಾಡುತ್ತಿದ್ದಾಗ ದೂರುದಾರರು ನಗದು ರೂಪದಲ್ಲಿ ಹಣವನ್ನು ಪಾವತಿ ಮಾಡುತ್ತಿರಲಿಲ್ಲ. ಆದರೆ, Phone Pay ಮಾಡುತ್ತಿದ್ದರು. ದೂರುದಾರರು ನನಗೆ ಸಾಲ ನೀಡುವಾಗ ತನ್ನ ಮಾವನ ಬಳಿ ಹಣ ಪಡೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸೂಚನೆಯಂತೆ ದೂರುದಾರರು ಚೆಕ್ಕನ್ನು ನಗದೀಕರಿಸಲು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚೆಕ್ಕು ಅಮಾನ್ಯಗೊಂಡ ನಂತರ ದೂರುದಾರರು ನನ್ನ ಬಳಿ ಬಂದು ಚೆಕ್ಕು ಅಮಾನ್ಯಗೊಂಡ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದೂರುದಾರರು ಕಳುಹಿಸಿರುವ ತಿಳುವಳಿಕೆ ಪತ್ರ ನನಗೆ ಜಾರಿ ಆಗಿರುವುದಿಲ್ಲ. ನಾನು ತಿಳುವಳಿಕೆ ಪತ್ರವನ್ನು ಸ್ವೀಕರಿಸಲು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ